**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು. ದಿನಾಂಕಃ** 09.02.2023.

**ಮುಖ್ಯ ವಿಚಾರಣೆಃ ವಾದಿಯರ ಪರವಾಗಿ ಶ್ರೀ. ಕೆ ಎನ್ ಎಸ್ ವಕೀಲರಿಂದಃ-**

**1.** ನಾನು ಈ ವ್ಯಾಜ್ಯದಲ್ಲಿ ವಾದಿಯಾಗಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

**2.** ದಾವಾ ಸ್ವತ್ತಿಗೆ ಸಂಬಂಧ ಪಟ್ಟ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ **1** ಎಂದು, ಪ್ರತಿವಾದಿಗಳಿಗೆ ನೀಡಿದ ನೋಟೀಸ್ ನ ಕಛೇರಿ ಪ್ರತಿಯನ್ನು ನಿಪಿ **2** ಎಂದು, ಅಂಚೆ ಸ್ವೀಕೃತಿಗಳನ್ನು ನಿಪಿ **3** ರಿಂದ **7** ಎಂದು, ಅಂಚೆ ರಶೀದಿಗಳನ್ನು ನಿಪಿ **8** ರಂದ **12** ಎಂದು, ನನಗೆ ಸಂಬಂಧಪಟ್ಟ ಬ್ಯಾಂಕ್ ಪಾಸ್ ಪುಸ್ತಕವನ್ನು ನಿಪಿ **13** ಎಂದು, ಮೂರು ಪಹಣಿಗಳನ್ನು ನಿಪಿ **14** ರಿಂದ **16** ಎಂದು, ದಿನಾಂಕ **03.06.1991** ರ ಕರಾರು ಪತ್ರವನ್ನು ಹಾಜರುಪಡಿಸಿರುತ್ತೇನೆ. (ಸದರಿ ಕರಾರು ಪತ್ರ **5** ರೂಪಾಯಿಯ ಟಸೆ ಕಾಗದಲ್ಲಿ ತಯಾರಿಸಿದ್ದು ಸದರಿ ದಾಖಲೆಗೆ ಸೂಕ್ತವಾದ ಮುದ್ರಾಂಕ ಶುಲ್ಕ ಪಾವತಿಸಿರುವ ಬಗ್ಗೆ ಕಂಡುಬಂದಿರುವುದಿಲ್ಲ. ವಾದಿ ಪರ ಮಾನ್ಯ ವಕೀಲರು ಮುದ್ರಾಂಕ ಶುಲ್ಕ ಪಾವತಿಸುವ ಬಗ್ಗೆ ಸುನಾವಣೆಗೆ ಕಾಲಾವಕಾಶ ಕೋರಿರುತ್ತಾರೆ.)

**(ದಿನಾಂಕ 03.06.1991 ರ ಕರಾರಿನ ಮೇಲೆ ಮುದ್ರಾಂಕ ಶುಲ್ಕದ ಬಗ್ಗೆ ಸುನಾವಣೆಗೆ ಮೂಂದೂಡಲಾಯಿತು)**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿ ಸಲಾಯ್ತು).**

**ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿವಿಲ್ ನ್ಯಾ. ಮತ್ತು ಜೆ ಎಂ ಎಫ್ ಸಿಃ ಸೊರಬ**